ಮೂಲ ದಾವಾ ಸಂಖ್ಯೆ 179/2019

ಪಿ ಡಬ್ಲ್ಯೂ-1

**(ದಿನಾಂಕ 03.02.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ M.C.M.B. ವಕೀಲರಿಂದಃ-**

ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ. ನನ್ನ ಜನ್ಮ ದಿನಾಂಕ ನೆನಪಿಲ್ಲಾ. ನನ್ನ ಮದುವೆ 1989 ರಲ್ಲಿ ಆಗಿರುತ್ತದೆ. ನನಗೆ ಮೊಮ್ಮಕ್ಕಳು ಸಹ ಇದ್ದಾರೆ. ನನಗೆ ಬಣಕಾರ ಒಬ್ಬರೇ ತಮ್ಮ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳು ನಾನೇ ಮುಂದೆ ನಿಂತು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನನ್ನ ತಂದೆ ಹೆಸರು ರೇವಣಸಿದ್ದಪ್ಪ. ನನ್ನ ತಂದೆ ಮತ್ತು ಬಣಕಾರ ನಡುವೆ ಪಾಲುವಿಭಾಗ ಆಗಿರುವ ಬಗ್ಗೆ ಎಂ ಆರ್ 37/2004-2005 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಸದರಿ ದಾಖಲೆ ಪ್ರಕಾರ ನನಗೆ ನನ್ನ ತಂದೆ ಮತ್ತು ಸಹೋದರರ ನಡುವೆ ಪಾಲು ವಿಭಾಗ ಆಗಿರುವ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಎಂ ಆರ್ 37/2004-2005 ರಲ್ಲಿ ವಿಭಾಗ ಅಂತ ಬರೆದಿರುವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ ಎಂದರೆ ಸರಿಯಲ್ಲ. 07.12.2004 ರಲ್ಲಿ ಪಾಲು ವಿಭಾಗ ಪತ್ರ ನೋಂದಾಗಿದೆ ಎಂದರೆ ಸರಿಯಲ್ಲ. ಪಾಲುವಿಭಾಗದ ಪತ್ರದ ಪ್ರಕಾರ ಕಂದಾಯದ ದಾಖಲೆಗಳು ಕೂಡ ಬದಲಾಗಿದೆ ಎಂದರೆ ಸರಿಯಲ್ಲ. ನೋಂದಾದ ಪಾಲು ವಿಭಾಗ ಪತ್ರ ವನ್ನು ನಾನು ತೆಗೆಯಿಸಿರುವುದಿಲ್ಲಾ. ನಮ್ಮ ತಂದೆ ಗೆ ಸರ್ವೆ ನಂಬರ 48 ಎ ನಲ್ಲಿ 2 ಎಕರೆ 12 ಸೆಂಟ್ಸ್, 1 ಎಕರೆ 55 ಸೆಂಟ್ಸ್ ಸರ್ವೆ ನಂಬರ 63 ಎ 1 ರಲ್ಲಿ 2 ಎಕರೆ 34 ಸೆಂಟ್ಸ್, ಸರ್ವೆ ನಂಬರ 58 ಬಿ 17 ಸೆಂಟ್ಸ್, ಸರ್ವೆ ನಂಬರ 68 ಬಿ 5 ಎಕರೆ 71 ಸೆಂಟ್ಸ್, ಸರ್ವೆ ನಂಬರ 58 ಬಿ 1 ರಲ್ಲಿ 91 ಸೆಂಟ್ಸ್ ಸರ್ವೆ ನಂಬರ 11 ಬಿ ನಲ್ಲಿ 1 ಎಕರೆ 54 ಸೆಂಟ್ಸ್ ಬಂದಿದೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗದಲ್ಲಿ ಬಣಕಾರಗೆ ಸರ್ವೆ ನಂಬರ 53 ರಲ್ಲಿ 4 ಎಕರೆ 53 ಸೆಂಟ್ಸ್ ಸರ್ವೆ ನಂಬರ

69 ಎ 1 ರಲ್ಲಿ 3 ಎಕರೆ 11 ಸೆಂಟ್ಸ್ ಪಾಲಿಗೆ ಬಂದಿದೆ ಎಂದರೆ ಸರಿಯಲ್ಲ. ಪಾಲುವಿಭಾಗ ಪತ್ರದ ಪ್ರಕರಣ ಕಂದಾಯ ದಾಖಲೆಗಳಲ್ಲಿ ಹೆಸರು ನಮೂದು ಆಗಿದೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರದ ಪ್ರಕಾರ ಒಟ್ಟು ಕುಟುಂಬ ಅಸ್ತಿತ್ವದಲ್ಲಿ ಉಳಿದಿಲ್ಲಾ ಎಂದರೆ ಸರಿಯಲ್ಲ. ಪಾಲುವಿಭಾಗ ಆದ ಬಗ್ಗೆ ನನಗೆ ಸಂಪೂರ್ಣ ಗೊತ್ತಿದ್ದರೂ ಸಹ ಹಕ್ಕು ಇಲ್ಲಾ ಅಂತಾ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 07.12.2004 ರಂದು ಪಾಲುವಿಭಾಗ ಆಗಿದ್ದು 20.04.1996 ರಲ್ಲಿ ಹಂಚಿಕೊಂಡಿದ್ದು 07.12.2004 ರಲ್ಲಿ ಅದು ನೋಂದಾಗಿದೆ ಎಂದರೆ ಸರಿಯಲ್ಲ. ನಮ್ಮ ತಂದೆ ಅವರ ಪಾಲಿಗೆ ಬಂದ ಅಸ್ತಿಗಳನ್ನು 02.07.2019 ರಲ್ಲಿ ದಾನಪತ್ರದ ಮೂಲಕ ಅವರ ಮಗ ಬಣಕಾರ ರವರಿಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ 65 ಬಿ ಐಟಂ 7ನೇ ಆಸ್ತಿ ಬಗ್ಗೆ ದಾಖಲೆ ನೋಡಿರುವುದಿಲ್ಲಾ. ಸದರಿ ಆಸ್ತಿಯನ್ನು ಚನ್ನಬಸ್ಸಮ್ಮ ಕೋಂ ಬಸ್ಸಪ್ಪನ ಹಸೆರಿಗೆ ಇದೆ ಎಂದರೆ ಸರಿ. ಚನ್ನಬಸ್ಸಮ್ಮ ಎಂದರೆ ನನ್ನ ಅಜ್ಜಿ. ನನ್ನ ತಂದೆಯ ತಾಯಿ. ಚನ್ನಬಸ್ಸಮ್ಮ 2011 ರಲ್ಲಿ ತೀರಿಕೊಂಡಿರುತ್ತಾರೆ. ಚನ್ನಬಸ್ಸಮ್ಮನಿಗೆ ಒಬ್ಬರೇ ಮಗ. 2019 ರಲ್ಲಿ ದಾವಾ ಹೂಡುವ ಸಂಧರ್ಭದಲ್ಲಿ ನನ್ನ ಸಹೋದರಿಯರು ಯಶೋದಮ್ಮ ನಿಂಗಮ್ಮ ಕರಿಬಸ್ಸಮ್ಮ ಶಾಂತಮ್ಮ ಪ್ರೇಮಕ್ಕ ರವರ ಜೊತೆ ಸಂಬಂಧ ಚೆನ್ನಾಗಿ ಇದೆ. ದಾವಾ ಹೂಡುವ ಪೂರ್ವದಲ್ಲಿ ಅವರನ್ನು ಸಂಪರ್ಕಿಸಿದ್ದೆ. ನನ್ನ ಸಹೋದರಿಯರು ಯಶೋದಮ್ಮ ನಿಂಗಮ್ಮ ಕರಿಬಸ್ಸಮ್ಮ ಶಾಂತಮ್ಮ ಪ್ರೇಮಕ್ಕ ದಾವಾ ಆಸ್ತಿಗಳಲ್ಲಿ ನಮಗೆ ಹಕ್ಕು ಇಲ್ಲಾ ದಾವಾ ಹೂಡುವುದು ಬೇಡಾ ಅಂತಾ ಹೇಳಿದ್ದರು ಎಂದರೆ ಸರಿಯಲ್ಲ. ಪಾಲುವಿಭಾಗ ಪತ್ರ ಮತ್ತು ದಾನ ಪತ್ರ ಮೋಸದ ಪತ್ರ ಅಂತಾ ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಸದರಿ ಪತ್ರಗಳಿಗೆ ಯಾರು ಯಾರು ಸಹಿ ಮಾಡಿರುತ್ತಾರೆ

ಎಂದರೆ ನನಗೆ ಗೊತ್ತಿಲ್ಲಾ. ಎರಡು ಪತ್ರಗಳು ಸಬ್ ರಜಿಸ್ಟ್ರರ ಕಚೇರಿಯಲ್ಲಿ ನೋಂದಾಗಿದೆ ಎಂದರೆ ನನಗೆ ಗೊತ್ತಿಲ್ಲಾ. ಈ ಹಿಂದೆ ಪಾಲು ವಿಭಾಗ ಆಗಿರುವ ಕಾರಣ ದಾವಾ ಆಸ್ತಿಗಳಲ್ಲಿ ನನಗೆ ಹಕ್ಕು ಇಲ್ಲಾ ಎಂದರೆ ಸರಿಯಲ್ಲ. ನನ್ನ ತಂದೆ ಈಗಲೂ ಚೆನ್ನಾಗಿ ಇದ್ದಾರೆ. ನಾನು ನಮ್ಮ ತಂದೆಯನ್ನು ಕಡೆಯ ಬಾರಿ ಯಾವಾಗ ಭೇಟಿ ಮಾಡಿದ್ದೆ ಎಂದರೆ 2017 ಕ್ಕಿಂತ ಪೂರ್ವದಲ್ಲಿ ಎನ್ನುತ್ತಾರೆ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ನನ್ನ ತಮ್ಮ ಮತ್ತು ನನ್ನ ತಂದೆಗೆ ತೊಂದರೆ ಕೊಡಲು ಸುಳ್ಳು ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.